# ಕೊರೊನಾ ಕುರಿತ ಪ್ರಶ್ನೆಗಳಿಗೆ ಉತ್ತರಗಳು



### ಕೊವಿಡ್-19 ಹೇಗೆ ಹರಡುತ್ತದೆ?

ಕೆಮ್ಮುವುದು, ಸೀನುವುದು ಮುಂತಾದ ಕ್ರಿಯೆಗಳ ಮೂಲಕ ಶ್ವಾಸಕೋಶದಿಂದ ಹೊರಹಾಕಲ್ಪಡುವ ಹನಿಗಳು ವ್ಯಕ್ತಿಯಿಂದ ವ್ಯಕ್ತಿಗೆ ರೋಗ ಹಬ್ಬಿಸುವ ಮುಖ್ಯ ವಾಹಕಗಳಾಗಿವೆ.

* ಮುಖ್ಯವಾಗಿ, ಕೊವಿಡ್-19 ಬಾಧಿತನು ಕೆಮ್ಮು, ಸೀನುಗಳ ಮೂಲಕ ಹೊರಹಾಕುವ ಶ್ವಾಸಕೋಶದ ಹನಿಗಳು ಆತನಿಂದ ಒಂದು ಮೀಟರಿಗೂ ಕಡಿಮೆ ಅಂತರದಲ್ಲಿರುವ ವ್ಯಕ್ತಿಗಳಿಗೆ ಉಸಿರಾಟದ ಮೂಲಕ ಅಥವಾ ಅವರ ಬಾಯಿ/ಮೂಗುಗಳು ಮುಚ್ಚಿರದಿದ್ದಲ್ಲಿ ಸೋಂಕಿಗೆ ಕಾರಣವಾಗುತ್ತವೆ.

* ಕೊವಿಡ್-19 ಬಾಧಿತರು ಕಾಯಿಲೆಯ ಪ್ರಾರಂಭಿಕ ಹಂತದಲ್ಲಿ ಬಹಳಬೇಗನೆ ವೈರಾಣುವನ್ನು ಬಿಡುಗಡೆ ಮಾಡುತ್ತಾರೆ ಮತ್ತು ಇದು ಗುಣಲಕ್ಷಣಗಳಿಲ್ಲದವರಿಗೆ/ಕಡಿಮೆ ಪ್ರಮಾಣದ ಗುಣಲಕ್ಷಣವುಳ್ಳವರಿಗೆ ತಗುಲುವ ಸಾಧ್ಯತೆ ಇದೆ ಎಂದು ಇತ್ತೀಚಿನ ಅಧ್ಯಯನಗಳು ತಿಳಿಸಿವೆ.

* ಇತ್ತೀಚೆಗೆ ಲಭ್ಯವಾದ ಮಾಹಿತಿಯಂತೆ ಕೆಮ್ಮು ಮತ್ತು ಸೀನುಗಳ ಮೂಲಕ ಜನರು ಈ ವೈರಾಣುವಿನ ಹಬ್ಬುವಿಕೆಗೆ ಕಾರಣರಾಗುತ್ತಾರೆ.

* ಕೊವಿಡ್-19 ತಗುಲಿರುವ ವ್ಯಕ್ತಿಯು ಕೆಮ್ಮಿದಾಗ ಅಥವಾ ಸೀನಿದಾಗ ಸಿಡಿದ ಹನಿಗಳು ಬಿದ್ದಿರುವ ವಸ್ತುಗಳನ್ನು ಮುಟ್ಟಿ, ನಂತರ ಅದೇ ಕೈಗಳಿಂದ ತಮ್ಮ ಬಾಯಿ, ಮೂಗು ಅಥವಾ ಕಣ್ಣುಗಳನ್ನು ಮುಟ್ಟುವುದರಿಂದ ಕೊರೊನಾ ಪರೋಕ್ಷವಾಗಿ ತಗುಲಬಹುದಾಗಿದೆ.

### ಕೊರೊನಾ ವೈರಾಣು ಬಾಧೆಯನ್ನು ತಡೆಗಟ್ಟಲು ಅಥವಾ ಬಾಧಿತರಿಗೆ ಚಿಕಿತ್ಸೆ ಮಾಡಲು ಆಂಟಿಬಯೋಟಿಕ್ ಔಷಧಿಗಳು ಪರಿಣಾಮಕಾರಿಯೇ?

ಇಲ್ಲ. ಆಂಟಿಬಯೋಟಿಕ್ ಔಷಧಿಗಳು ಬ್ಯಾಕ್ಟಿರಿಯಾಗಳ ವಿರುದ್ಧ ಹೋರಾಡಬಲ್ಲವು ವೈರಾಣುಗಳ ವಿರುದ್ಧ ಹೋರಾಡಲಾರವು. ಹೊಸ ಕೊರೊನಾ (2019-ಟಿಎಔಗಿ) ಒಂದು ವೈರಾಣುವಾಗಿರುವಾಗಿರುವುದರಿಂದ ಅದನ್ನು ತಡೆಗಟ್ಟಲು ಅಥವಾ ಚಿಕಿತ್ಸೆ ನೀಡಲು ಆಂಟಿಬಯೋಟಿಕ್ ಬಳಸಬಾರದು. ಆದರೆ, (2019-ಟಿಎಔಗಿ) ಬಾಧಿತರಿಗೆ ಬ್ಯಾಕ್ಟಿರಿಯಾ ಸಂಬಂಧಿ ಸೋಂಕು ತಗುಲಬಾರದೆಂಬ ಕಾರಣದಿಂದ ಆಸ್ಪತ್ರೆಗಳಲ್ಲಿ ಆಂಟಿಬಯೋಟಿಕ್ ನೀಡಲಾಗುತ್ತದೆ.

### ಸಾಮಾನ್ಯ ರೋಗಲಕ್ಷಣಗಳು ಯಾವುವು?

ಜ್ವರ,ಕೆಮ್ಮು ಮತ್ತು ಇತರ ಶ್ವಾಸಕೋಶ ಸಂಬಂಧಿ ತೊಂದರೆಗಳು ಕೊವಿಡ್-19 ತಗುಲಿರುವ ಮುಖ್ಯ ರೋಗಲಕ್ಷಣಗಳಾಗಿವೆ. ಗಂಭೀರ ಪ್ರಕರಣಗಳಲ್ಲಿ ನ್ಯುಮೋನಿಯಾ ಕಂಡುಬರಬಹುದು. ತೀವ್ರ ಸ್ವರೂಪದ ಕಾಯಿಲೆಯು ಕೆಲವೊಮ್ಮೆ ಸಾವಿಗೂ ಕಾರಣವಾಗಬಹುದು (Wಊಔ). ಕೆಲವೊಮ್ಮೆ ರೋಗಿಗಳು ಮೌಂಸಖಂಡಗಳಲ್ಲಿ ನೋವು, ಗೊಂದಲಕ್ಕೀಡಾಗುವಿಕೆ,ತಲೆನೋವು ಮುಂತಾದವುಗಳಿಂದ ಬಳಲಬಹುದು. ಕೆಲ ಪ್ರಕರಣಗಳಲ್ಲಿ ಭೇದಿಯಾಗಿರುವುದೂ ಕಂಡುಬಂದಿದೆ. ಈ ಕಾಯಿಲೆಯು ಫ್ಲೂ ಮತ್ತು ಇತರ ಶ್ವಾಸಕೋಶದ ಕಾಯಿಲೆಗಳ ಲಕ್ಷಣಗಳನ್ನು ಹೊಂದಿರುವುದರಿಂದ ಪ್ರಯೋಗಾಲಯದಲ್ಲಿ ರೋಗಪತ್ತೆ ಮಾಡಬೇಕಾಗುತ್ತದೆ.

.

### ಈ ಕಾಯಿಲೆ ಹರಡದಂತೆ ಏನು ಮಾಡಬೇಕು?

ಕೊರೊನಾ ವೈರಾಣು ಹಬ್ಬದಂತೆ ಮಾಡಲು ಬೇಗನೆ ರೋಗವನ್ನು ಪತ್ತೆ ಮಾಡುವುದು, ರೋಗಾಣುವಿನ ಮೂಲವನ್ನು ನಿಯಂತ್ರಿಸುವುದು, ಅಪಾಯಗಳನ್ನು ಕುರಿತಂತೆ ಸೂಕ್ತ ತಿಳಿವಳಿಕೆ ನೀಡುವುದು ಮತ್ತು ಜನಸಮುದಾಯದ ಭಾಗವಹಿಸುವಿಕೆ, ಸೋಂಕು ಹಬ್ಬದಂತೆ ಕಟ್ಟುನಿಟ್ಟಾಗಿ ಎಚ್ಚರಿಕೆ ವಹಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳುವುದು ಮುಖ್ಯವಾಗಿದೆ.

ಸೋಂಕಿಗೀಡಾಗಬಹುದಾದ ಅಪಾಯದಲ್ಲಿರುವವರನ್ನು ಬೇಗನೆ ಗುರುತಿಸಿ ಅವರಿಗೆ ಎಲ್ಲಿ ಮತ್ತು ಯಾವಾಗ ಅಗತ್ಯ ಚಿಕಿತ್ಸೆ ಪಡೆಯಬೇಕೆಂಬ ಮಾಹಿತಿ ನೀಡಬೇಕು. ಆರೋಗ್ಯ ಕಾರ್ಯಕರ್ತರು ರೋಗ ಹಬ್ಬಬಹುದಾದ ವಲಯಗಳ ಬಗ್ಗೆ ಜಾಗರೂಕರಾಗಿರಬೇಕು ಮತ್ತು ಸರಿಯಾದ ಸಮಯದಲ್ಲಿ ರೋಗಪತ್ತೆ ಪರೀಕ್ಷೆಗಳನ್ನು ಮಾಡಬೇಕು.

### ಹೊಸ ಕೊರೊನಾವೈರಾಣು ಕೇವಲ ವಯಸ್ಸಾದವರನ್ನು ಬಾಧಿಸುತ್ತದೆಯೇ ಅಥವಾ ಯುವಜನರೂ ಇದರಿಂದ ಬಾಧಿತರಾಗಬಹುದೆ?

ಹೊಸ ಕೊರೊನವೈರಾಣುವಿನ ಸೋಂಕು ಎಲ್ಲ ವಯಸ್ಸಿನವರನ್ನೂ ಬಾಧಿಸಬಹುದು (2019-ಟಿಎಔಗಿ). ವಯಸ್ಸಾದವರು, ಅಸ್ತಮಾ,ಮಧುಮೇಹ,ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಈ ವೈರಾಣುವಿನ ಸೋಂಕು ಬಹಳ ಬೇಗನೆ ತಗುಲುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯು ಎಲ್ಲ ವಯೋಮಾನದ ವ್ಯಕ್ತಿಗಳೂ ವೈರಾಣುವಿನ ವಿರುದ್ಧ ತಮ್ಮನ್ನು ಸಂರಕ್ಷಿಸಿಕೊಳ್ಳಬೇಕೆಂದು ಸಲಹೆ ನೀಡುತ್ತದೆ. ಕೈಗಳ ಸ್ವಚ್ಛತೆ ಮತ್ತು ಶ್ವಾಸಕೋಶ ಸಂಬಂಧಿ ಸ್ವಚ್ಛತೆಯ ಸೂತ್ರಗಳ ಪಾಲನೆಯ ಮೂಲಕ ಈ ವೈರಾಣುವಿನ ವಿರುದ್ಧ ಸುರಕ್ಷೆ ಲಭಿಸುತ್ತದೆ

### ಕೊವಿಡ್-19 ರಿಂದ ಜನರು ತಮ್ಮನ್ನು ಯಾವರೀತಿಯಲ್ಲಿ ಸಂರಕ್ಷಿಸಿಕೊಳ್ಳಬಹುದು?

ವೈರಾಣುವಿನ ಹಬ್ಬುವಿಕೆ ಕುರಿತಂತೆ ಸ್ಥಳಿಯ ಮತ್ತು ರಾಷ್ಟ್ರೀಯ ಪ್ರಾಧಿಕಾರಗಳು ನೀಡುವ ಇತ್ತೀಚಿನ ಮಾಹಿತಿಯನ್ನು ಸದಾ ಗಮನಿಸುತ್ತಿರಬೇಕು.

* ಸಾಬೂನು ಮತ್ತು ನೀರನ್ನು ಬಳಸಿ ಅಥವಾ ಸ್ಯಾನಿಟೈಸರ್ಗಳನ್ನು ಬಳಸಿ ಕೈಗಳನ್ನು ಆಗಾಗ ತೊಳೆದುಕೊಳ್ಳಬೇಕು.

* ಕೆಮ್ಮುವಾಗ, ಸೀನುವಾಗ ಬಾಯಿ ಮತ್ತು ಮೂಗುಗಳನ್ನು ಕರವಸ್ತ್ರ,ಟಿಶ್ಯೂ ಕಾಗದಗಳಿಂದ ಮುಚ್ಚಿಕೊಳ್ಳಬೇಕು. ಇಲ್ಲವೇ ತೋಳುಗಳಿಂದ ಮುಖ,ಮೂಗುಗಳನ್ನು ಮುಚ್ಚಿಕೊಳ್ಳಬೇಕು. ಬಳಸಿದ ಟಿಶ್ಯೂ ಕಾಗದವನ್ನು ತಕ್ಷಣವೇ ಮುಚ್ಚಿದ ಕಸದಬುಟ್ಟಿಯಲ್ಲಿ ಹಾಕಬೇಕು.

* ಕೆಮ್ಮು,ಜ್ವರಗಳಿಂದ ಬಳಲುತ್ತಿದ್ದಲ್ಲಿ ಇತರರೊಂದಿಗೆ ನಿಕಟ ಸಂಪರ್ಕ ಹೊಂದಬಾರದು.

* ಕಾಯಿಲೆಪೀಡಿತ ಪ್ರಾಣಿಗಳ ಸಂಪರ್ಕ ಹೊಂದಬಾರದು. ಹಳಸಿದ ಮೌಂಸ, ಮಾರುಕಟ್ಟೆಗಳ ತ್ಯಾಜ್ಯವಸ್ತುಗಳಿಂದ ದೂರವಿರಬೇಕು.

* ಆಹಾರ ಸುರಕ್ಷೆಯನ್ನು ಪಾಲಿಸಬೇಕು.

* ಜ್ವರ,ಕೆಮ್ಮು,ಉಸಿರಾಟದ ತೊಂದರೆಗಳು ಕಂಡುಬಂದಲ್ಲಿ, ತಕ್ಷಣ ವೈದ್ಯಕೀಯ ಚಿಕಿತ್ಸೆ ಪಡೆಯಬೇಕು.

ಆರೋಗ್ಯ ಕಾರ್ಯಕರ್ತರೊಂದಿಗೆ ತಾವು ಈ ಹಿಂದೆ ಮಾಡಿದ್ದ ಪ್ರಯಾಣದ ವಿವರಗಳು, ಅಥವಾ ಕೊವಿಡ್-19 ಬಾಧಿತ ಪ್ರದೇಶಗಳಿಂದ ಬಂದವರೊಂದಿಗೆ ತಾವು ಹೊಂದಿದ ಸಂಪರ್ಕ ಮುಂತಾದ ವಿವರಗಳನ್ನು ಆರೋಗ್ಯ ಕಾರ್ಯಕರ್ತರಿಗೆ ನೀಡಬೇಕು.

NIRDPR | CRU COMMUNICATION RESOURCE UNIT A JOINT INITIATIVE OF NIRDPR & UNICEF · World Health Organization India · unicef for every child · NATIONAL HEALTH MISSION

### ಫ್ಲೂ ಮತ್ತು ಕೊವಿಡ್-19 ಬಾಧಿತರಲ್ಲಿ ಕಂಡುಬರುವ ರೋಗಲಕ್ಷಣಗಳಲ್ಲಿ ಏನಾದರೂ ವ್ಯತ್ಯಾಸಗಳಿವೆಯೇ?

ಕೆಮ್ಮು ಮತ್ತು ನೆಗಡಿಗಳು ಅಲರ್ಜಿಯಿಂದ ಉಂಟಾಗುತ್ತವೆ. ಕೆಮ್ಮು ಮತ್ತು ನೆಗಡಿಗಳೊಂದಿಗೆ ಜ್ವರವೂ ಕಾಣಿಸಿಕೊಂಡಲ್ಲಿ ಅದು ಫ್ಲೂ ಬಂದಿರುವ ಲಕ್ಷಣವಾಗಿದೆ. ಕೆಮ್ಮು,ಜ್ವರಗಳೊಂದಿಗೆ ಉಸಿರಾಟದ ತೊಂದರೆಗಳು ಕಂಡುಬಂದಲ್ಲಿ, ಅದು ಕೊರೊನಾ ವೈರಾಣು ಸೋಂಕಿನ ಲಕ್ಷಣವಾಗಿದ್ದು, ನೀವು ಅದನ್ನು ಪತ್ತೆ ಮಾಡಲು ತಕ್ಷಣ ವೈದ್ಯರನ್ನು ಕಾಣಬೇಕು.

### ಮಾಸ್ಕ್ ಧರಿಸುವುದರಿಂದ ಕೊರೊನಾವೈರಾಣು ಹಬ್ಬುವುದನ್ನು ತಡೆಗಟ್ಟಬಹುದೇ?

ಸಾಮಾನ್ಯವಾಗಿ, ಎಲ್ಲರೂ ಮಾಸ್ಕ್ ಧರಿಸಬೇಕಾದ ಅಗತ್ಯವಿಲ್ಲ. ಕೊವಿಡ್-**19** ವೈರಾಣುವಿನ ಬಾಧಿತರು ಮತ್ತು ಸೋಂಕಿಗೀಡಾದವರ ಸಂಪರ್ಕಕ್ಕೆ ಬರುವ ಆರೋಗ್ಯ ಸೇವಾಕಾರ್ಯಕರ್ತರು ಮಾಸ್ಕ್ ಧರಿಸುವ ಅಗತ್ಯವಿದೆ. ಇತರರು ಮಾಸ್ಕ್ ಧರಿಸಬೇಕಾಗಿಲ್ಲ. ಸೋಂಕಿಗೀಡಾಗಬಹುದಾದ ಅಪಾಯವಿರುವ ಪ್ರದೇಶಗಳಿಗೆ ನೀವು ಹೋಗಬೇಕಾದ ಪಕ್ಷದಲ್ಲಿ ಉದಾ: ಆಸ್ಪತ್ರೆಗಳು ನೀವು ಮಾಸ್ಕ್ ಧರಿಸಬೇಕಾಗುತ್ತದೆ. ಸಾರ್ವಜನಿಕ ಸಾರಿಗೆ ಬಳಸುವಾಗಲೂ ಕೂಡ ಸೋಂಕಿಗೀಡಾಗುವ ಸಾಧ್ಯತೆ ಇರುವುದರಿಂದ ನೀವು ಮಾಸ್ಕ್ ಧರಿಸಬೇಕು.

### ವೈರಾಣು ಹಬ್ಬದಿರಲು ಮೌಂಸಾಹಾರ ಸೇವನೆಯನ್ನು ತ್ಯಜಿಸಬೇಕೇ?

ಮೌಂಸಾಹಾರಕ್ಕೂ ಕೊರೊನಾ ವೈರಾಣುವಿಗೂ ಏನೂ ಸಂಬಂಧವಿಲ್ಲ. ಇದು ಶ್ವಾಸಕೋಶ ಸಂಬಂಧಿ ವೈರಾಣುವಾಗಿದ್ದು, ಆಹಾರಸಂಬಂಧಿತ ಕಾಯಿಲೆಗೆ ಕಾರಣವಾಗುವುದಿಲ್ಲ. ಕೊರೊನಾವೈರಾಣುವಿಗೂ ಆಹಾರ,ಸಾಕುಪ್ರಾಣಿಗಳು,ಮೌಂಸಾಹಾರ ಸೇವನೆಗೂ ಯಾವ ಸಂಬಂಧವೂ ಇಲ್ಲ. ಜನರು ತಮ್ಮಿಷ್ಟ ಬಂದ ಆಹಾರವನ್ನು ಎಷ್ಟು ಬೇಕಾದರೂ ಸೇವಿಸಬಹುದು.

### ಹೊಸ ಕೊರೊನಾವೈರಾಣುವಿನ ಸೋಂಕಿಗೀಡಾದವರನ್ನು ಪತ್ತೆ ಹಚ್ಚಲು ಥರ್ಮಲ್ ಸ್ಕ್ಯಾನರ್‌ಗಳು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿವೆ?

ಕೊರೊನಾ ವೈರಾಣುವಿನ ಸೋಂಕಿನಿಂದಾಗಿ ದೇಹದಲ್ಲಿ ಸಾಮಾನ್ಯ ಉಷ್ಣತೆಗಿಂತ ಹೆಚ್ಚು ಉಷ್ಣತೆ ಇರುವುದನ್ನು ಥರ್ಮಲ್ ಸ್ಕ್ಯಾನರ್‌ಗಳು ಪತ್ತೆ ಹಚ್ಚಬಲ್ಲವು. ಆದರೆ, ಜ್ವರವಿಲ್ಲದಿದ್ದರೂ ವೈರಾಣುವಿನ ಸೋಂಕಿಗೀಡಾದವರನ್ನು ಇವು ಪತ್ತೆ ಹಚ್ಚಲಾರವು. ಏಕೆಂದರೆ, ಸೋಂಕಿಗೀಡಾಗಿದ್ದರೂ ಕೂಡ ಅಂಥವರಿಗೆ **2** ರಿಂದ **10** ದಿನಗಳ ಅವಧಿಯಲ್ಲಿ ಜ್ವರ ಕಾಣಿಸಿಕೊಳ್ಳುತ್ತದೆ.

### ಶರೀರದ ಮೇಲೆ ಅಲ್ಕೋಹಾಲ್ ಅಥವಾ ಕ್ಲೋರಿನ್ ಸಿಂಪಡಿಸುವುದರಿಂದ ಹೊಸ ಕೊರೊನಾ ವೈರಾಣುವನ್ನು ಸಾಯಿಸಬಹುದೇ?

ಇಲ್ಲ. ಈಗಾಗಲೇ ಶರೀರವನ್ನು ಪ್ರವೇಶಿಸಿದ ವೈರಾಣುಗಳನ್ನು ಅಲ್ಕೋಹಾಲ್ ಅಥವಾ ಕ್ಲೋರಿನ್ ಸಿಂಪಡಿಸುವುದರ ಮೂಲಕ ಸಾಯಿಸಲಾಗುವುದಿಲ್ಲ. ಅಂಥ ರಾಸಾಯನಿಕಗಳನ್ನು ಸಿಂಪಡಿಸುವುದರಿಂದ ಕಣ್ಣು,ಬಾಯಿಗಳ ಸೂಕ್ಷ್ಮ ಪ್ರದೇಶಗಳಿಗೆ ಹಾನಿಯಾಗುತ್ತದೆ. ವಸ್ತುಗಳ ಮೇಲಿರುವ ಸೋಂಕುಕಾರಕಗಳನ್ನು ಅಲ್ಕೋಹಾಲ್ ಮತ್ತು ಕ್ಲೋರೀನ್ ಇವೆರಡರಿಂದಲೂ ಸೂಕ್ತ ಎಚ್ಚರಿಕೆಯ ಕ್ರಮಗಳ ಮೂಲಕ ನಿವಾರಿಸಬಹುದು.

### ಕೊವಿಡ್-19 ಕ್ಕೆ ಲಸಿಕೆಯನ್ನು ಕಂಡುಹಿಡಿಯಲು ಎಷ್ಟು ಸಮಯ ತಗುಲಬಹುದು?

ಈಗ ಪ್ರಯೋಗಗಳು ನಡೆಯುತ್ತಿದ್ದು, ಇನ್ನೊಂದು ವರ್ಷದಲ್ಲಿ ಕೊವಿಡ್-**19** ಕ್ಕೆ ಲಸಿಕೆಯನ್ನು ಕಂಡು ಹಿಡಿಯಲು ಸಾಧ್ಯವಾಗಬಹುದು. H1N1 ಗೆ ಈಗಾಗಲೇ ಲಸಿಕೆಯನ್ನು ಕಂಡುಹಿಡಿಯಲಾಗಿದ್ದು, ಅದೇ ರೀತಿಯಲ್ಲಿ ಕೊವಿಡ್_**19** ಕ್ಕೂ ಲಸಿಕೆಯನ್ನು ಕಂಡುಹಿಡಿಯಬಹುದು. ಯಾವುದೇ ಲಸಿಕೆಯನ್ನು ಅಭಿವೃದ್ಧಿಪಡಿಸಲು ಕನಿಷ್ಠ ಒಂದು ವರ್ಷ ಬೇಕಾಗುತ್ತದೆ.

### ವ್ಯಕ್ತಿಯ ರೋಗನಿರೋಧಕ ಶಕ್ತಿಗೂ ಕೊವಿಡ್-19 ಕ್ಕೂ ಸಂಬಂಧವಿದೆಯೇ? ಇದನ್ನು ಗುಣಪಡಿಸಬಹುದೇ?

ವೈರಾಣುಗಳ ಕುಟುಂಬದಲ್ಲಿ ಕೊರೊನಾ ವೈರಾಣು ಅತ್ಯಂತ ದುರ್ಬಲವಾದ ವೈರಾಣುಗಳಲ್ಲೊಂದಾಗಿದೆ. ಇದುವರೆಗೆ ಇದರಿಂದ ಸಾವಿಗೀಡಾದವರು ಅಥವಾ ಸೋಂಕಿಗೀಡಾದವರಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುವ ಚಿಕ್ಕಮಕ್ಕಳು ಅಥವಾ ವಯಸ್ಸಾದವರು ಹೆಚ್ಚಾಗಿದ್ದಾರೆ. ಕೊರೊನಾ ವೈರಾಣು ಎಲ್ಲರನ್ನೂ ಬಾಧಿಸಲಾರದು. ಹೆಚ್ಐವಿ,ಕ್ಯಾನ್ಸರ್ ಪೀಡಿತರು, ಅಂಗಾಂಗ ಜೋಡಣೆಯ ಶಸ್ತ್ರಚಿಕಿತ್ಸೆಗೊಳಗಾದವರು, ಮಧುಮೇಹಿಗಳು ಸೋಂಕಿಗೊಳಗಾಗುವ ಸಾಧ್ಯತೆ ಹೆಚ್ಚಿದೆ. ಮಕ್ಕಳು ಮತ್ತು ವಯಸ್ಸಾದವರೂ ಕೂಡ ಸೋಂಕಿಗೀಡಾಗುವ ಸಾಧ್ಯತೆ ಹೆಚ್ಚು. ಚೈನಾ ಮತ್ತು ಇರಾನ್ ದೇಶಗಳಲ್ಲಿ ಈ ಸೋಂಕಿನಿಂದ ಸಾವಿಗೀಡಾದವರ ಪ್ರಕರಣಗಳನ್ನು ಗಮನಿಸಿದಲ್ಲಿ, ಅವರಲ್ಲಿ **90%** ರಷ್ಟು ಜನರು ರೋಗನಿರೋಧಕ ಶಕ್ತಿಯನ್ನು ಕಡಿಮೆ ಮಾಡಿದ ಯಾವುದಾದರೂ ಕಾಯಿಲೆಯಿಂದ ಬಳಲುತ್ತಿದ್ದುದು ಕಂಡುಬಂದಿದೆ. ವೈರಾಣುವಿನಿಂದ ಸಾವಿಗೀಡಾದವರ ವಯಸ್ಸಿನ ಸರಾಸರಿ **59.** ಅರವತ್ತಕ್ಕೆ ಮೇಲ್ಪಟ್ಟ ವಯಸ್ಸಿನವರಲ್ಲಿ ವೈರಾಣು ಸೋಂಕಿನ ನಂತರ ಸಾವಿಗೀಡಾಗುವವರ ಪ್ರಮಾಣವು **3.4%** ರಷ್ಟು, ಎಪ್ಪತ್ತಕ್ಕೆ ಮೇಲ್ಪಟ್ಟ ವಯಸ್ಸಿನವರಲ್ಲಿ **8%** ರಷ್ಟು ಹಾಗೂ ಎಂಬತ್ತಕ್ಕೂ ಮೇಲ್ಪಟ್ಟ ವಯಸ್ಸಿನವರಲ್ಲಿ **15%** ಎಂದು ಕಂಡುಬಂದಿದೆ. ಸಾಮಾನ್ಯವಾಗಿ ರೋಗನಿರೋಧಕ ಶಕ್ತಿಯು ಉತ್ತಮವಾಗಿದ್ದಲ್ಲಿ, ಯಾವುದೇ ವೈರಾಣುವಿನ ಸೋಂಕಿಗೆ ಪ್ರತಿರೋಧ ಒಡ್ಡಬಹುದು ಆದರೆ ಕೊವಿಡ್**19** ಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ.

### ಕೊವಿಡ್-19 ರ ಲಕ್ಷಣಗಳು ನನ್ನಲ್ಲಿ ಕಾಣಿಸಿಕೊಂಡಲ್ಲಿ ನಾನು ಆಸ್ಪತ್ರೆಯನ್ನು ನೇರವಾಗಿ ಸಂಪರ್ಕಿಸಬಹುದೆ?

ನೀವು ಆಸ್ಪತ್ರೆಯನ್ನು ನೇರವಾಗಿ ಸಂಪರ್ಕಿಸಬಾರದು. **104** ಸಂಖ್ಯೆಗೆ ಕರೆ ಮಾಡಿ ವೈದ್ಯರನ್ನು ಭೇಟಿ ಮಾಡುವ ಕುರಿತು ಮಾಹಿತಿ ಪಡೆಯಬೇಕು.

### ಕೊವಿಡ್-19 ರ ಲಕ್ಷಣಗಳು ನನ್ನಲ್ಲಿ ಕಾಣಿಸಿಕೊಂಡಲ್ಲಿ ನಾನು ಆಸ್ಪತ್ರೆಯನ್ನು ನೇರವಾಗಿ ಸಂಪರ್ಕಿಸಬಹುದೆ?

ನೀವು ಆಸ್ಪತ್ರೆಯನ್ನು ನೇರವಾಗಿ ಸಂಪರ್ಕಿಸಬಾರದು. **104** ಸಂಖ್ಯೆಗೆ ಕರೆ ಮಾಡಿ ವೈದ್ಯರನ್ನು ಭೇಟಿ ಮಾಡುವ ಕುರಿತು ಮಾಹಿತಿ ಪಡೆಯಬೇಕು.

### ಕೊವಿಡ್-19 ರ ಲಕ್ಷಣಗಳು ನನ್ನಲ್ಲಿ ಕಾಣಿಸಿಕೊಂಡಲ್ಲಿ ನಾನು ಆಸ್ಪತ್ರೆಯನ್ನು ನೇರವಾಗಿ ಸಂಪರ್ಕಿಸಬಹುದೆ?

ನೀವು ಆಸ್ಪತ್ರೆಯನ್ನು ನೇರವಾಗಿ ಸಂಪರ್ಕಿಸಬಾರದು. **104** ಸಂಖ್ಯೆಗೆ ಕರೆ ಮಾಡಿ ವೈದ್ಯರನ್ನು ಭೇಟಿ ಮಾಡುವ ಕುರಿತು ಮಾಹಿತಿ ಪಡೆಯಬೇಕು.

### ನ್ಯುಮೋನಿಯಾ ವಿರುದ್ಧದ ಲಸಿಕೆಗಳು ಹೊಸ ಕೊರೊನ ವೈರಾಣುವಿನ ವಿರುದ್ಧ ರಕ್ಷಣೆ ನೀಡಬಲ್ಲವೇ?

ಇಲ್ಲ. ನ್ಯುಮೋನಿಯಾ ಕಾಯಿಲೆಗೆ ನೀಡಲಾಗುವ ನ್ಯುಮೋಕೊಕಲ್ ಲಸಿಕೆ ಮತ್ತು ಟೈಪ್ ಬಿ ಹೆಮೊಫಿಲಸ್ ಇನ್‌ಫ್ಲುಯೆನ್ಝಾ (**ಊib**) ಲಸಿಕೆಗಳು ಹೊಸ ಕೊರೊನಾ ವೈರಾಣುವಿನ ವಿರುದ್ಧ ರಕ್ಷಣೆ ನೀಡಲಾರವು. ಇದು ಹೊಸ ಮತ್ತು ವಿಭಿನ್ನ ವೈರಾಣುವಾದ್ದರಿಂದ ಇದಕ್ಕಾಗಿಯೇ ವಿಶಿಷ್ಟವಾದ ಲಸಿಕೆ ತಯಾರಿಸಬೇಕಾಗುತ್ತದೆ. ಕೊವಿಡ್-**19** ಗೆ ಲಸಿಕೆ ಕಂಡುಹಿಡಿಯಲು ವಿಜ್ಞಾನಿಗಳು ಪ್ರಯೋಗ ನಡೆಸುತ್ತಿದ್ದಾರೆ.

### ಬೆಳ್ಳುಳ್ಳಿ ತಿನ್ನುವುದರಿಂದ ಹೊಸ ಕೊರೊನ ವೈರಾಣುವಿನಿಂದ ಆಗುವ ಸೋಂಕನ್ನು ತಡೆಗಟ್ಟಬಹುದೇ?

ಬೆಳ್ಳುಳ್ಳಿಯು ಒಂದು ಆರೋಗ್ಯಕರವಾದ ಆಹಾರವಾಗಿದ್ದು ಕೆಲವು ಸೂಕ್ಷ್ಮಾಣು ನಿರೋಧಕ ಗುಣಗಳನ್ನು ಒಳಗೊಂಡಿದೆ. ಆದರೆ ಬೆಳ್ಳುಳ್ಳಿ ತಿನ್ನುವುದರಿಂದ ಕೊರೊನಾ ವೈರಾಣುವಿನ ಸೋಂಕಿನಿಂದ ಪಾರಾಗಬಹುದು ಎನ್ನುವುದಕ್ಕೆ ಯಾವುದೇ ಸಾಕ್ಷ್ಯಗಳಿಲ್ಲ.

### ಕೊವಿಡ್-19 ಚಿಕಿತ್ಸೆಗಾಗಿ ಯಾವುದಾದರೂ ಮನೆಮದ್ದುಗಳಿವೆಯೇ?

ಅಲೋಪಥಿ ಹೊರತುಪಡಿಸಿ ಮನೆಮದ್ದುಗಳು ಮತ್ತಿತರ ಯಾವುದೇ ಚಿಕಿತ್ಸಾ ಪ್ರಕಾರಗಳ ಸತ್ಯಾಸತ್ಯತೆಗಳು ದೃಢಪಟ್ಟಿಲ್ಲ. ಮುನ್ನೆಚ್ಚರಿಕೆಯೇ ಅತ್ಯುತ್ತಮ ಉಪಾಯವಾಗಿದೆ.

**ಕೊವಿಡ್_19 ವೈರಾಣುವು ಉಷ್ಣಪ್ರದೇಶಗಳಲ್ಲಿ ಮತ್ತು ತೇವಾಂಶವಿರುವ ಪ್ರದೇಶಗಳಲ್ಲಿ ಹರಡಬಹುದೆ?**

ಇದುವರೆಗೆ ತಿಳಿದುಬಂದಂತೆ, ಕೊವಿಡ್-**19** ಉಷ್ಣಪ್ರದೇಶಗಳು ಮತ್ತು ತೇವಾಂಶವಿರುವ ಪ್ರದೇಶಗಳೂ ಸೇರಿದಂತೆ ಎಲ್ಲ ಪ್ರದೇಶಗಳಲ್ಲೂ ಹಬ್ಬಬಹುದಾಗಿದೆ. ವಾತಾವರಣ ಯಾವುದೇ ಇರಲಿ, ನೀವು ಕೊವಿಡ್-**19** ಪ್ರದೇಶದಲ್ಲಿ ವಾಸಿಸುತ್ತಿದ್ದರೆ ಅಥವಾ ಅಲ್ಲಿಗೆ ಹೋಗುತ್ತಿದ್ದರೆ ಎಲ್ಲ ಬಗೆಯ ಸುರಕ್ಷಾಕ್ರಮಗಳನ್ನು ಅನುಸರಿಸಿ.



**ಬಿಸಿನೀರಿನ ಸ್ನಾನವು ಕೊರೊನಾ ವೈರಾಣುವಿನ ಕಾಯಿಲೆಯನ್ನು ತಡೆಗಟ್ಟಬಹುದೆ?**

ಬಿಸಿನೀರಿನ ಸ್ನಾನವು ನಿಮ್ಮನು ್ನಕೊವಿಡ್-**19** ಸೋಂಕಿಗೀಡಾಗುವುದರ ವಿರುದ್ಧ ರಕ್ಷಣೆ ನೀಡುವುದಿಲ್ಲ. ನೀವು ಸ್ನಾನ ಮಾಡದಿದ್ದರೂ, ಮಾಡಿದರೂ ನಿಮ್ಮ ದೇಹದ ಉಷ್ಣಾಂಶವು ಸುಮಾರು **36.5** ರಿಂದ **37** ಡಿಗ್ರಿ ಸೆಂಟಿಗ್ರೇಡ್‌ನಷ್ಟಿರುತ್ತದೆ. ವಾಸ್ತವದಲ್ಲಿ ಅತಿಯಾಗಿ ಬಿಸಿ ಇರುವ ನೀರಿನ ಸ್ನಾನವು ನಿಮ್ಮ ಚರ್ಮಕ್ಕೆ ಘಾಸಿಯನ್ನುಂಟು ಮಾಡಬಹುದು.

**ಸೊಳ್ಳೆಗಳು ಕಚ್ಚುವುದರಿಂದ ಕೊರೊನಾ ವೈರಾಣು ಹರಡುತ್ತದೆಯೇ?**

ಸೊಳ್ಳೆಗಳು ಕಚ್ಚುವುದರಿಂದ ಹೊಸ ಕೊರೊನಾ ವೈರಾಣು ಹಬ್ಬುತ್ತದೆ ಎಂಬುದಕ್ಕೆ ಇದುವರೆಗೆ ಯಾವುದೇ ಪುರಾವೆಗಳಿಲ್ಲ. ಹೊಸ ಕೊರೊನಾ ವೈರಾಣುವು ಒಂದು ಶ್ವಾಸಕೋಶ ಸಂಬಂಧಿತ ವೈರಾಣುವಾಗಿದ್ದು, ಸೋಂಕುಪೀಡಿತನು ಕೆಮ್ಮಿದಾಗ ಅಥವಾ ಸೀನಿದಾಗ ಸಿಡಿಯುವ ಹನಿಗಳ ಮೂಲಕ ಹಬ್ಬುವ ಕಾಯಿಲೆಯಾಗಿದೆ. ಉಗುಳಿನ ಹನಿಗಳು, ಮೂಗಿನ ದ್ರವಗಳು ಈ ಕಾಯಿಲೆಯನ್ನು ಹರಡುತ್ತವೆ.

**ಮೂಗನ್ನು ನಿಯಮಿತವಾಗಿ ಸಲೈನ್‌ನಿಂದ ತೊಳೆಯುವ ಮೂಲಕ ಹೊಸ ಕೊರೊನಾ ವೈರಾಣುವಿನಿಂದಾಗುವ ಸೋಂಕಿನ ವಿರುದ್ಧ ರಕ್ಷಣೆ ಪಡೆಯಬಹುದೇ?**

ಇಲ್ಲ. ಸಲೈನ್‌ನಿಂದ ಆಗಾಗ ಮೂಗನ್ನು ತೊಳೆಯುವುದರಿಂದ ಹೊಸ ಕೊರೊನಾ ವೈರಾಣುವಿನ ಸೋಂಕನ್ನು ತಡೆಗಟ್ಟಬಹುದು ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ.